# ::ಪಟ್ಟಣ ಪಂಚಾಯಿತಿ ಕಾರ್ಯಾಲಯ, ಸೊರಬ::

ನಂ.ಸೊಪಪಂ.ವಿವ.ಸಿ2.ಸಿಆರ್.33/09-10 ದಿನಾಂಕ:30-11-2009

::ಸಾರ್ವಜನಿಕ ಪ್ರಕಟಣೆ::

ಈ ಮೂಲಕ ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ತಿಳಿಯಪಡಿಸುವುದೇನೆಂದರೇ, ಪಟ್ಟಣ ಪಂಚಾಯಿತಿ ಸೊರಬ 2009-10ನೇ ಸಾಲಿನ ನಗರ ಸ್ಥಳೀಯ ಸಂಸ್ಥೆಯ ಸ್ವಂತ ಆದಾಯ ಹಾಗೂ ಎಸ್.ಎಫ್.ಸಿ ಮುಕ್ತನಿಧಿಯ ಶೇ.22.75ರಡಿಯಲ್ಲಿ ವಿವಿಧ ಉಚಿತ ಸವಲತ್ತುಗಳನ್ನು ವಿತರಿಸುವ ಬಗ್ಗೆ ಅರ್ಹ ಫಲಾನುಭವಿಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದೆ. ಉಚಿತ ಸವಲತ್ತು ಪಡೆಯಲು ಇಚ್ಚಿಸುವ ಪಲಾನುಭವಿಗಳು ಈ ಕೆಳಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಾಖಲಾತಿಗಳೊಂದಿಗೆ ಈ ಕಛೇರಿಗೆ ಖುದ್ದಾಗಿ ಅರ್ಜಿ ಸಲ್ಲಿಸಿ ಸ್ವೀಕೃತಿಪಡೆಯಲು ತಿಳಿಸಿದೆ.

| ಕ್ರ.ಸಂ | ಸವಲತ್ತು ವಿವರ | ಸಲ್ಲಿಸಬೇಕಾದ ದಾಖಲಾತಿಗಳು |
|---|---|---|
| 1. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಹ ಫಲಾನುಭವಿಗಳಿಗೆ ಗಣಕ ಯಂತ್ರ ವಿತರಿಸುವುದು. | 1.ನಿಗದಿತ ನಮೂನೆಯಲ್ಲಿ ಅರ್ಜಿ.<br>2.ಚಾಲ್ತಿ ಸಾಲಿನ ಜಾತಿ ಪ್ರಮಾಣ ಪತ್ರದ ನಕಲು(ದೃಢೀಕರಣ ಪ್ರತಿ)<br>3.ಚಾಲ್ತಿ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು(ದೃಢೀಕರಣ ಪ್ರತಿ)<br>4.ಕಂಪ್ಯೂಟರ್ ತರಬೇತಿ ಪ್ರಮಾಣ ಪತ್ರ(ದೃಢೀಕರಣ ಪತ್ರ)<br>5.ಪಡಿತರ ಚೀಟಿ ನಕಲು ಪ್ರತಿ<br>6.ಮತದಾರರ ಚೀಟಿ ನಕಲು ಪ್ರತಿ.<br>7.ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಪೋಟೋ-3 ಪ್ರತಿ. |
| 2. | ವಸತಿ ಯೋಜನೆಯಡಿಯಲ್ಲಿ ಪಕ್ಕಾ ಮನೆ ನಿರ್ಮಾಣಕ್ಕಾಗಿ ಸಹಾಯಧನ ನೀಡುವುದು. | 1.ನಿಗದಿತ ನಮೂನೆಯಲ್ಲಿ ಅರ್ಜಿ.<br>2.ಚಾಲ್ತಿ ಸಾಲಿನ ಜಾತಿ ಪ್ರಮಾಣ ಪತ್ರದ ನಕಲು(ದೃಢೀಕರಣ ಪ್ರತಿ)<br>3.ಚಾಲ್ತಿ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು(ದೃಢೀಕರಣ ಪ್ರತಿ)<br>4.ನಿವೇಶನ ಖಾತೆ ನಕಲು ಪ್ರತಿ.<br>5.ಪಡಿತರ ಚೀಟಿ ನಕಲು ಪ್ರತಿ<br>6.ಮತದಾರರ ಚೀಟಿ ನಕಲು ಪ್ರತಿ.<br>7.ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಪೋಟೋ-3 ಪ್ರತಿ. |
| 3. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ದವರಿಗೆ ಆರ್ಥಿಕ ಸೌಲಭ್ಯಕ್ಕಾಗಿ ಆಟೋ ರಿಕ್ಷಾ ಖರೀದಿಗಾಗಿ ಸಹಾಯ ಧನ ನೀಡುವುದು | 1.ನಿಗದಿತ ನಮೂನೆಯಲ್ಲಿ ಅರ್ಜಿ.<br>2.ಚಾಲ್ತಿ ಸಾಲಿನ ಜಾತಿ ಪ್ರಮಾಣ ಪತ್ರದ ನಕಲು(ದೃಢೀಕರಣ ಪ್ರತಿ)<br>3.ಚಾಲ್ತಿ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು(ದೃಢೀಕರಣ ಪ್ರತಿ)<br>4.ಬ್ಯಾಂಕಿನಿಂದ ಸಾಲ ಮಂಜೂರಾತಿ ಆದೇಶ ಪ್ರತಿ/ಡೌನ್‌ಪೇಮೆಂಟ್‌ನ ವಿವರ(ಬ್ಯಾಂಕಿನ ಮೋಹರಿನೊಂದಿಗೆ)<br>5.ಪಡಿತರ ಚೀಟಿ ನಕಲು ಪ್ರತಿ<br>6.ಮತದಾರರ ಚೀಟಿ ನಕಲು ಪ್ರತಿ.<br>7.ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಪೋಟೋ-3 ಪ್ರತಿ.<br>8.ವಾಹನ ಚಾಲನೆ ಡ್ರೈವಿಂಗ್ ಲೈಸೆನ್ಸ್. |
| 4. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ದವರಿಗೆ ಕೃತಕ ಅಂಗ ಜೋಡಣೆ , ಹೃದಯ ಶಸ್ತ್ರಚಿಕಿತ್ಸೆ, ಬೈಪಾಸ್ ಸರ್ಜರಿ ಹಾಗೂ ಬಾರಿ ಶಸ್ತ್ರ ಚಿಕಿತ್ಸೆಗೆ ಸಹಾಯ ಧನ ನೀಡುವುದು | 1.ನಿಗದಿತ ನಮೂನೆಯಲ್ಲಿ ಅರ್ಜಿ.<br>2 ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ (ಚಾಲ್ತಿ ಸಾಲು)<br>3.ವೈದ್ಯಕೀಯ ಪರೀಕ್ಷೆಯ ದಾಖಲಾತಿಗಳು ಬಿಲ್ಲ್‌ಗಳು ಮತ್ತು ಸಂಬಂಧಿಸಿದಂತೆ ದಾಖಲಾತಿಗಳು.<br>4.ಪಡಿತರ ಚೀಟಿ ನಕಲು ಪ್ರತಿ<br>5.ಮತದಾರರ ಚೀಟಿ ನಕಲು ಪ್ರತಿ.<br>6.ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಪೋಟೋ-3 ಪ್ರತಿ. |

| | | |
|---|---|---|
| 5 | ಪದವಿ ಪೂರ್ವ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿಶೇಷ ನೆರವು ನೀಡುವ ಕಾರ್ಯಕ್ರಮ.<br>1)ಬಿ.ಎ, ಬಿ.ಎಸ್ಸಿ, ಬಿಕಾಂ ಸ್ನಾತಕ ಪದವಿ.<br>2)ಸ್ನಾತಕೋತ್ತರ ಪದವಿ(ಎಂ.ಎ, ಎಂ.ಎಸ್ಸಿ, ಎಂ.ಕಾಂ, ಎಂ.ಸಿ.ಎ, ಎಂ.ಇ.ಡಿ, ಬಿ.ಇ, ಎಲ್.ಎಲ್.ಬಿ , ಎಂ.ಬಿ.ಬಿ.ಎಸ್, ಬಿ.ಡಿ.ಎಸ್, ಎಂ.ಫೀಲ್ ಹಾಗೂ ಎಂಟೆಕ್ ಹಾಗೂ ಎಂ.ಎಸ್, ಪಿ.ಹೆಚ್.ಡಿ ಸಂಶೋದನೆ ವಿದ್ಯಾರ್ಥಿಗಳಿಗೆ. | 1.ನಿಗದಿತ ನಮೂನೆಯಲ್ಲಿ ಅರ್ಜಿ.<br>2 ಚಾಲ್ತಿ ಸಾಲಿನ ಆದಾಯ ಪ್ರಮಾಣ ಪತ್ರ ಮತ್ತು ಜಾತಿ ಪ್ರಮಾಣ ಪತ್ರ ನಕಲು ಪ್ರತಿ(ದೃಢೀಕರಣ ಪ್ರತಿ)<br>3.ವಿಧ್ಯಾಭ್ಯಾಸ ಮಾಡುತ್ತಿರುವ ಶೈಕ್ಷಣಿಕ ಸಂಸ್ಥೆಯ ದೃಢೀಕರಣ ಪ್ರತಿ ಎಲ್ಲಾ ದಾಖಲಾತಿಗಳೊಂದಿಗೆ(Student Certificate)<br>4.ಪಡಿತರ ಚೀಟಿ ನಕಲು ಪ್ರತಿ<br>5.ಮತದಾರರ ಚೀಟಿ ನಕಲು ಪ್ರತಿ.<br>6.ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಪೋಟೋ-3 ಪ್ರತಿ. |

**ಸೂಚನೆ**:

1) ಅರ್ಜಿಯನ್ನು ಕಛೇರಿಯ ಸಹಾಯವಾಣಿ ಕೇಂದ್ರದಲ್ಲಿ ಪಡೆಯಬಹುದಾಗಿದೆ.
2) ಎಲ್ಲಾ ದಾಖಲಾತಿಗಳನ್ನು ಕಡ್ಡಾಯವಾಗಿ ಲಗತ್ತಿಸಿ ಅರ್ಜಿ ಸಲ್ಲಿಸತಕ್ಕದ್ದು.`
3) ಅರ್ಜಿ ಸಲ್ಲಿಸಲು ಕಡೇ ದಿನಾಂಕ:31-12-2009ರ ಸಂಜೆ 5.30ವರೆಗೆ ಮಾತ್ರ, ನಂತರ ಬಂದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.
4) ಹೆಚ್ಚಿನ ಮಾಹಿತಿ ಬೇಕಾದ್ದಲ್ಲಿ ಕಛೇರಿಯಲ್ಲಿ ಸಂಬಂಧಪಟ್ಟವರಿಂದ ಮಾಹಿತಿ ಪಡೆಯಬಹುದಾಗಿದೆ. (www.sorabatown.gov.in)
5) ಪಲಾನುಭವಿಗಳ ಅಂತಿಮ ಆಯ್ಕೆಯಾದ ನಂತರ ಪತ್ರದ ಮೂಲಕ ತಿಳಿಯಪಡಿಸಲಾಗುವುದು.

ಸಹಿ/-
ಶ್ರೀ.ಮಂಚಿ ಸೋಮಪ್ಪ
ಅಧ್ಯಕ್ಷರು,
ಪಟ್ಟಣ ಪಂಚಾಯಿತಿ,ಸೊರಬ

ಸಹಿ/-
ಕೆ.ನರಸಿಂಹಮೂರ್ತಿ
ಮುಖ್ಯಾಧಿಕಾರಿ,
ಪಟ್ಟಣ ಪಂಚಾಯಿತಿ,ಸೊರಬ